**ಅಬಕಾರಿ ಆಯುಕ್ತರು, ಕರ್ನಾಟಕ ರಾಜ್ಯ, ಬೆಂಗಳೂರು ಇವರ ನಡವಳಿಗಳು**

ವಿಷಯ: ಕೋವಿಡ್-19 ಜಾರಿಯಲ್ಲಿರುವುದರಿಂದ, ಲಾಕ್‌ಡೌನ್ ಹಿನ್ನಲೆಯಲ್ಲಿ ಸಿಎಲ್-2, ಸಿಎಲ್-11 ಸಿ ಮತ್ತು ವೈನ್ ಬೊಟೀಕ್ ಸನ್ನದಿನಲ್ಲಿ ಮಾರಾಟವಾಗದೇ ಉಳಿದಿರುವ ಮದ್ಯ/ಬಿಯರ್ ಮತ್ತು ವೈನ್ ಅನ್ನು ಮಾರಾಟ ಮಾಡುವ ಕುರಿತು.

ಉಲ್ಲೇಖ:
1. ಈ ಕಛೇರಿಯ ಆದೇಶ ಸಂಖ್ಯೆ: ಇಸಿಇ/04/ಜ.ಕ್ರೈಂ/2019-20 ದಿನಾಂಕ: 02/05/2020.
2. ಈ ಕಛೇರಿಯ ಆದೇಶ ಸಂಖ್ಯೆ: ಇಸಿಇ/44/ಜ.ಐಎಂಎಲ್/2019-20 ದಿನಾಂಕ: 06/05/2020
3. Order and New Guidelines issued by the Ministry of Home Affairs, Government of India vide Order No. 40-3/2020-DM-I(A) dated: 30-05-2020

******

**ಪ್ರಸ್ತಾವನೆ:-**

ಉಲ್ಲೇಖ-01 ರಿಂದ 02 ರವರೆಗಿನ ಆದೇಶಗಳಲ್ಲಿ, ಸಿಎಲ್-2 ಸಿಎಲ್-11(ಸಿ) ಮತ್ತು ವೈನ್ ಬೊಟೀಕ್ ಸನ್ನದುಗಳನ್ನು ತೆರೆದು ಮದ್ಯ ಮಾರಾಟ ಮಾಡಲು ಅನುಮತಿ ನೀಡಲಾಗಿರುತ್ತದೆ. ಆದರೆ, ಕೋವಿಡ್-19 ಜಾರಿಯಲ್ಲಿರುವುದರಿಂದ, ಲಾಕ್‌ಡೌನ್ ಹಿನ್ನಲೆಯಲ್ಲಿ, ಸನ್ನದುಗಳು ಆದೇಶಿತ ಅವಧಿಯಲ್ಲಿ ಬೆಳಗ್ಗೆ 9.00 ಗಂಟೆಯಿಂದ ಸಂಜೆ 7.00 ಗಂಟೆಯವರೆಗೆ ಮಾತ್ರವೇ ಕಾರ್ಯನಿರ್ವಹಿಸಬೇಕೆಂಬ ಷರತ್ತು ವಿಧಿಸಲಾಗಿರುತ್ತದೆ.

ಪ್ರಸ್ತುತ ಕೇಂದ್ರ ಸರ್ಕಾರವು ಉಲ್ಲೇಖ-03 ರಲ್ಲಿ ಹೊರಡಿಸಿರುವ ಮಾರ್ಗಸೂಚಿಯಲ್ಲಿ ಕರ್ಫ್ಯೂ ಅವಧಿಯನ್ನು ರಾತ್ರಿ 9.00 ಗಂಟೆಯಿಂದ ಬೆಳಗ್ಗೆ 5.00 ಗಂಟೆಯವರೆಗೆ ಎಂದು ತಿಳಿಸಲಾಗಿರುತ್ತದೆ. ಆದಕಾರಣ, ಸನ್ನದು ವಹಿವಾಟಿನ ಅವಧಿಯನ್ನು "ಬೆಳಗ್ಗೆ 9.00 ಗಂಟೆಯಿಂದ ರಾತ್ರಿ 9.00 ಗಂಟೆಯವರೆಗೆ" ನಿಗದಿಪಡಿಸಬೇಕಾಗಿರುತ್ತದೆ. ಅದರಂತೆ, ಈ ಕೆಳಕಂಡ ಆದೇಶ.

**ಈ ಕಛೇರಿಯ ಆದೇಶ ಸಂಖ್ಯೆ: ಇಸಿಐ/44/ಜ.ಐಎಂಎಲ್/2019-20, ದಿ:01-06-2020**

ಪ್ರಸ್ತಾವನೆಗಳಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಉಲ್ಲೇಖ-01 ಮತ್ತು 02 ರ ಆದೇಶದಲ್ಲಿ, ಸಿಎಲ್-2 ಸಿಎಲ್-11(ಸಿ) ಮತ್ತು ವೈನ್ ಬೊಟೀಕ್ ಸನ್ನದುಗಳಿಗೆ ಸನ್ನದು ವ್ಯವಹಾರ ಅವಧಿಯನ್ನು **"ಬೆಳಗ್ಗೆ 9.00 ಗಂಟೆಯಿಂದ ಸಂಜೆ 7.00 ಗಂಟೆಯವರೆಗೆ"** ಎಂದು ಷರತ್ತು ವಿಧಿಸಿರುವುದನ್ನು **"ಬೆಳಗ್ಗೆ 9.00 ಗಂಟೆಯಿಂದ ರಾತ್ರಿ 9.00 ಗಂಟೆಯವರೆಗೆ"** ಎಂದು ಮಾರ್ಪಾಡು ಮಾಡಿ ಆದೇಶಿಸಿದೆ. ಉಳಿದಂತೆ ಉಲ್ಲೇಖ-01 ಮತ್ತು 02 ರ ಆದೇಶಗಳಲ್ಲಿ ವಿಧಿಸಲಾಗಿರುವ ಬೇರೆ ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಅಬಕಾರಿ ಆಯುಕ್ತರು

**ಪ್ರತಿಯನ್ನು:-**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
2. ಡೈರೆಕ್ಟರ್ ಜನರಲ್ & ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಕರ್ನಾಟಕ ರಾಜ್ಯ, ಬೆಂಗಳೂರು.
3. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
4. ರಾಜ್ಯದ ಎಲ್ಲಾ ವಿಭಾಗದ ಅಬಕಾರಿ ಜಂಟಿ ಆಯುಕ್ತರುಗಳಿಗೆ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ.
5. ರಾಜ್ಯದ ಎಲ್ಲಾ ಜಿಲ್ಲೆಗಳ ಅಬಕಾರಿ ಉಪ ಆಯುಕ್ತರುಗಳಿಗೆ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ.
6. ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಬಿ.ಸಿ.ಎಲ್, ಬೆಂಗಳೂರು ಇವರಿಗೆ ಮಾಹಿತಿಗಾಗಿ.
7. ಕಛೇರಿ ಪ್ರತಿ/ಹೆಚ್ಚಿನ ಪ್ರತಿ.

Scanned with CamScanner

**ಅಬಕಾರಿ ಆಯುಕ್ತರು, ಕರ್ನಾಟಕ ರಾಜ್ಯ, ಬೆಂಗಳೂರು ಇವರ ನಡವಳಿಗಳು**

ವಿಷಯ: ಕೋವಿಡ್-19 ಜಾರಿಯಲ್ಲಿರುವುದರಿಂದ, ಲಾಕ್‌ಡೌನ್ ಹಿನ್ನಲೆಯಲ್ಲಿ ಸಿಎಲ್-4, ಸಿಎಲ್-6ಎ, ಸಿಎಲ್-7, ಸಿಎಲ್-7ಎ, ಸಿಎಲ್-7ಬಿ, ಸಿಎಲ್-9, ಸಿಎಲ್-16, ಸಿಎಲ್-17, ಸಿಎಲ್-18 ಮತ್ತು ವೈನ್ ಟಾವರಿನ್ ಸನ್ನದಿನಲ್ಲಿ ಮಾರಾಟವಾಗದೇ ಉಳಿದಿರುವ ಮದ್ಯ/ಬಿಯರ್ ಮತ್ತು ವೈನ್ ಅನ್ನು ಮಾರಾಟ ಮಾಡುವ ಕುರಿತು.

ಉಲ್ಲೇಖ:
1. Order and New Guidelines issued by the Ministry of Home Affairs, Government of India vide Order No. 40-3/2020-DM-I(A) dated: 30-05-2020.
2. ಈ ಕಛೇರಿಯ ಆದೇಶ ಸಂಖ್ಯೆ: ಇಸಿಇ/45/ಜ.ಐಎಂಎಲ್/2019-20, ದಿನಾಂಕ: 18-05-2020.

******

**ಪ್ರಸ್ತಾವನೆ:-**

ಉಲ್ಲೇಖ-01 ರಲ್ಲಿ ಕೇಂದ್ರ ಸರ್ಕಾರವು ನೀಡಿದ ಮಾರ್ಗಸೂಚಿಯಲ್ಲಿ ಕಂಟೈನ್‌ಮೆಂಟ್ ಜೋನ್‌ಗಳಲ್ಲಿ ಲಾಕ್‌ಡೌನ್ ಅವಧಿಯನ್ನು ದಿನಾಂಕ:30-06-2020 ರವರೆಗೆ ವಿಸ್ತರಿಸಲಾಗಿರುತ್ತದೆ. ಸದರಿ ಮಾರ್ಗಸೂಚಿಯಲ್ಲಿನ ಅಂಶಗಳನ್ನು ಗಮನದಲ್ಲಿರಿಸಿಕೊಂಡು, ಕೋವಿಡ್-19 ಸಾಂಕ್ರಾಮಿಕ ರೋಗವನ್ನು ತಡೆಗಟ್ಟುವ ಕಾರಣದಿಂದ ಲಾಕ್‌ಡೌನ್ ಹಿನ್ನೆಲೆಯಲ್ಲಿ ತೆರೆಯದ ಸಿಎಲ್-4, ಸಿಎಲ್-6ಎ, ಸಿಎಲ್-7, ಸಿಎಲ್-7ಎ, ಸಿಎಲ್-7ಬಿ, ಸಿಎಲ್-9, ಸಿಎಲ್-16, ಸಿಎಲ್-17, ಸಿಎಲ್-18 ಮತ್ತು ವೈನ್ ಟಾವರಿನ್ ಸನ್ನದುಗಳನ್ನು ದಿನಾಂಕ:.31.05.2020 ರವರೆಗೆ ತೆರೆದು ಮದ್ಯ ಮಾರಾಟ ಮಾಡಲು ಅನುಮತಿ ನೀಡಲಾಗಿರುತ್ತದೆ.

ದಿನಾಂಕ:31.05.2020 ರವರೆಗೆ ಮದ್ಯ ಮಾರಾಟಕ್ಕೆ ನೀಡಿರುವ ಅವಧಿಯು ಮುಕ್ತಾಯಗೊಂಡಿದ್ದು, ಇನ್ನೂ ಸ್ವಲ್ಪ ದಿನಗಳ ಮಟ್ಟಿಗೆ ಮದ್ಯ ಮಾರಾಟ ಮಾಡಲು ಅವಕಾಶವನ್ನು ನೀಡಿ, ಕಾಲಾವಕಾಶವನ್ನು ವಿಸ್ತರಿಸುವಂತೆ ಸನ್ನದುದಾರರು ಮನವಿ ಮಾಡಿರುತ್ತಾರೆ. ಆದ್ದರಿಂದ ಈ ಕೆಳಕಂಡ ಆದೇಶ.

**ಈ ಕಛೇರಿಯ ಆದೇಶ ಸಂಖ್ಯೆ: ಇಸಿಐ/45/ಜ.ಐಎಂಎಲ್/2019-20, ದಿ:01-06-2020**

ಪ್ರಸ್ತಾವನೆಗಳಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ರಾಜ್ಯದಲ್ಲಿರುವ ಸಿಎಲ್-4, ಸಿಎಲ್-6ಎ, ಸಿಎಲ್-7, ಸಿಎಲ್-7ಎ, ಸಿಎಲ್-7ಬಿ, ಸಿಎಲ್-9, ಸಿಎಲ್-16, ಸಿಎಲ್-17, ಸಿಎಲ್-18 ಮತ್ತು ವೈನ್ ಟಾವರಿನ್ ಸನ್ನದುಗಳನ್ನು ಸಿಎಲ್-2 ಸನ್ನದುಗಳ ರೀತಿಯಲ್ಲಿ **ದಿನಾಂಕ: 01.06.2020 ರಿಂದ 30.06.2020 ರವರೆಗೆ** ಅಥವಾ ಮುಂದಿನ ಆದೇಶದವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಮದ್ಯ ಮಾರಾಟ ಮಾಡಲು ಈ ಕೆಳಕಂಡ ಷರತ್ತುಗಳನ್ನು ವಿಧಿಸಿ ಆದೇಶಿಸಿರುತ್ತೇನೆ.

**ಷರತ್ತುಗಳು:-**

(1) ಹಾಲಿ ಸಿಎಲ್-4, ಸಿಎಲ್-6ಎ, ಸಿಎಲ್-7, ಸಿಎಲ್-7ಎ, ಸಿಎಲ್-7ಬಿ, ಸಿಎಲ್-9, ಸಿಎಲ್-16, ಸಿಎಲ್-17, ಸಿಎಲ್-18 ಮತ್ತು ವೈನ್ ಟಾವರಿನ್ ಸನ್ನದಿನಲ್ಲಿ ಹೊಸದಾಗಿ ಕೆ.ಎಸ್.ಬಿ.ಸಿ.ಎಲ್. ಡಿಪೋದಿಂದ ಮದ್ಯ ಖರೀದಿಗೆ ಈ ಮೂಲಕ ಅವಕಾಶ ನೀಡಲಾಗಿದ್ದು, ಎಲ್ಲಾ ದಾಸ್ತಾನನ್ನು ಸಹ ಸೀಲ್ಡ್ ಬಾಟಲುಗಳಲ್ಲಿ ಮಾತ್ರ ನಿಗದಿಪಡಿಸಿರುವ ಎಂ.ಆರ್.ಪಿ. ದರದಲ್ಲೇ ಗ್ರಾಹಕರಿಗೆ ಮಾರಾಟ ಮಾಡಲು ಅನುಮತಿ ನೀಡಲಾಗಿದೆ.

(2) ಸಿಎಲ್-4, ಸಿಎಲ್-6ಎ, ಸಿಎಲ್-7, ಸಿಎಲ್-7ಎ, ಸಿಎಲ್-7ಬಿ, ಸಿಎಲ್-9, ಸಿಎಲ್-16, ಸಿಎಲ್-17, ಸಿಎಲ್-18 ಮತ್ತು ವೈನ್ ಟಾವರಿನ್ ಸನ್ನದುಗಳಲ್ಲಿ ಇರುವ ರೆಸ್ಟೋರೆಂಟ್‌ಗಳಲ್ಲಿ ಗ್ರಾಹಕರಿಗೆ ಊಟ/ತಿಂಡಿಯನ್ನು ಕೇವಲ ಪಾರ್ಸೆಲ್ (take away) ರೂಪದಲ್ಲಿ ಮಾತ್ರ ನೀಡಬಹುದಾಗಿದೆ.

(3) Stand Alone ಸಿಎಲ್-4, ಸಿಎಲ್-6ಎ, ಸಿಎಲ್-7, ಸಿಎಲ್-7ಎ, ಸಿಎಲ್-7ಬಿ, ಸಿಎಲ್-9, ಸಿಎಲ್-16, ಸಿಎಲ್-17, ಸಿಎಲ್-18 ಮತ್ತು ವೈನ್ ಟಾವರಿನ್ ಸನ್ನದುಗಳಿಗೆ ಮಾತ್ರ ಈ ಅನುಮತಿಯು ಅನ್ವಯವಾಗುವುದು.

(4) ಕಂಟೈನ್‌ಮೆಂಟ್ ಜೋನ್‌ಗಳಲ್ಲಿ ಇರುವಂತಹ ಸನ್ನದುಗಳಿಗೆ ಅನ್ವಯವಾಗುವುದಿಲ್ಲ.

(5) ಯಾವುದೇ ಉಲ್ಲಂಘನೆಯಾದಲ್ಲಿ ಅಥವಾ ದುರುಪಯೋಗವಾದಲ್ಲಿ ಸಂಬಂಧಪಟ್ಟ ಸನ್ನದುದಾರರೇ ಜವಾಬ್ದಾರರಾಗುವುದಲ್ಲದೇ ಸನ್ನದುಗಳನ್ನು ಅಮಾನತ್ತು/ರದ್ದುಗೊಳಸುವ ಕ್ರಮಗಳನ್ನೊಳಗೊಂಡಂತೆ **ಯಾವುದೇ ಕ್ರಮ ಕೈಗೊಳ್ಳುವ ಅಧಿಕಾರವು ಇಲಾಖೆಯು ಹೊಂದಿರುತ್ತದೆ.**

Scanned with CamScanner

(6) ಕೇಂದ್ರ ಸರ್ಕಾರ/ರಾಜ್ಯ ಸರ್ಕಾರ/ಜಿಲ್ಲಾಡಳಿತ/ಸ್ಥಳೀಯ ಸಂಸ್ಥೆಗಳು ಘೋಷಿಸಿರುವ Containment Zones ಗಳಲ್ಲಿ ಮದ್ಯ ಮಾರಾಟ ಸನ್ನದುಗಳು ಕಾರ್ಯನಿರ್ವಹಿಸುವಂತಿಲ್ಲ.

(7) ಕೇಂದ್ರ ಸರ್ಕಾರ/ರಾಜ್ಯ ಸರ್ಕಾರ/ಜಿಲ್ಲಾಡಳಿತ/ಸ್ಥಳೀಯ ಸಂಸ್ಥೆಗಳು ಘೋಷಿಸಿರುವ Containment Zones ಗಳನ್ನು ಹೊರತುಪಡಿಸಿ ಇನ್ನುಳಿದ ಸ್ಥಳಗಳಲ್ಲಿ ಮಾತ್ರವೇ ಸಿಎಲ್-4, ಸಿಎಲ್-6ಎ, ಸಿಎಲ್-7, ಸಿಎಲ್-7ಎ, ಸಿಎಲ್-7ಬಿ, ಸಿಎಲ್-9, ಸಿಎಲ್-16, ಸಿಎಲ್-17, ಸಿಎಲ್-18 ಮತ್ತು ವೈನ್ ಟಾವರಿನ್ ಗಳನ್ನು ತೆರೆದು ಮದ್ಯ ಮಾರಾಟ ಮಾಡಲು ಅನುಮತಿಸಿದೆ.

(8) ಹೀಗೆ ಕಾರ್ಯನಿರ್ವಹಿಸುವ ಸನ್ನದುಗಳು ಮದ್ಯ/ಬೀರ್/ವೈನ್ ಮಾರಾಟ ವಹಿವಾಟನ್ನು ಬೆಳಗ್ಗೆ 9.00 ಗಂಟೆಯಿಂದ ರಾತ್ರಿ 9.00 ಗಂಟೆಯವರೆಗೆ ಮಾತ್ರ ನಡೆಸಲು ಕಾಲಮಿತಿಯನ್ನು ನಿಗಧಿಪಡಿಸಲಾಗಿದ್ದು, ರೆಸ್ಟೋರೆಂಟ್‌ನಲ್ಲಿ ಊಟ/ತಿಂಡಿಯನ್ನು ಪಾರ್ಸೆಲ್ (take away) ರೂಪದಲ್ಲಿ ಮಾತ್ರ ನೀಡಲು ಇತರೆ ರೆಸ್ಟೋರೆಂಟ್‌ಗಳಿಗೆ ನಿಗಧಿಪಡಿಸಿರುವ ಕಾಲಮಿತಿಯಂತೆ ಕಾರ್ಯನಿರ್ವಹಿಸತಕ್ಕದೆಂದು ತಿಳಿಸಿದೆ.

(9) ಉಲ್ಲೇಖಿತ ಆದೇಶದಲ್ಲಿ ತಿಳಿಸಲಾದಂತೆ ಸನ್ನದು ಮಳಿಗೆಯಲ್ಲಿ ಕೇವಲ 5 ಜನ ಗ್ರಾಹಕರು ಮಾತ್ರ ಇರುವಂತೆಯು ಹಾಗೂ ಅವರುಗಳು ಸಾಮಾಜಿಕ ಅಂತರವಾದ 6 ಅಡಿಗಳಿಗೆ ಕಡಿಮೆ ಇಲ್ಲದಂತೆ ಅಂತರವನ್ನು ಕಾಪಾಡಿಕೊಳ್ಳುವುದು.

(10) ಸನ್ನದಿನಲ್ಲಿನ ನೌಕರರು ಗ್ಲೌಸ್ ಹಾಗೂ Mask ನ್ನು ಧರಿಸುವುದು ಹಾಗೂ ಮದ್ಯ ಖರೀದಿಗೆ ಬರುವ ಗ್ರಾಹಕರು Mask ಗಳನ್ನು ಹಾಕಿಕೊಳ್ಳುವುದನ್ನು ಕಡ್ಡಾಯಪಡಿಸಿಕೊಂಡು ಸನ್ನದು ಸ್ಥಳದಲ್ಲಿ ಸ್ಯಾನಿಟೈಸರ್‌ಗಳನ್ನು ಬಳಸುವುದು.

(11) ಕೇವಲ Stand alone ಸಿಎಲ್-4, ಸಿಎಲ್-6ಎ, ಸಿಎಲ್-7, ಸಿಎಲ್-7ಎ, ಸಿಎಲ್-7ಬಿ, ಸಿಎಲ್-9, ಸಿಎಲ್-16, ಸಿಎಲ್-17, ಸಿಎಲ್-18 ಮತ್ತು ವೈನ್ ಟಾವರಿನ್ ಸನ್ನದುಗಳಿಗೆ ಮಾತ್ರವೇ ಅನುಮತಿಸಲಾಗಿದ್ದು, ಮಾಲ್‌ಗಳು ಹಾಗೂ ಸೂಪರ್ ಮಾರ್ಕೆಟ್‌ಗಳಲ್ಲಿ ಸದರಿ ಸನ್ನದುಗಳು ಇದ್ದಲ್ಲಿ ಈ ಅನುಮತಿ ಅನ್ವಯವಾಗುವುದಿಲ್ಲ.

(12) ಮೇಲೆ ತಿಳಿಸಲಾದ ಷರತ್ತುಗಳೊಂದಿಗೆ ಕರ್ನಾಟಕ ಅಬಕಾರಿ ಕಾಯ್ದೆ ಹಾಗೂ ಅನ್ವಯಿಸುವ ತತ್ಸಂಬಂಧ ನಿಯಮಗಳನ್ನೂ ಕೂಡ ಪಾಲಿಸುವುದು. ಈ ಆದೇಶವನ್ನು ಅಬಕಾರಿ ಉಪ ಆಯುಕ್ತರುಗಳು ಪರಿಪೂರ್ಣವಾಗಿ ಜಾರಿ ಮಾಡುವುದು. ಆದೇಶ ಉಲ್ಲಂಘಿಸುವ ಸನ್ನದುಗಳನ್ನು ಅಮಾನತ್ತು/ರದ್ದುಪಡಿಸಲು ಕ್ರಮ ಜರುಗಿಸುವುದು.

(13) ದಿನಾಂಕ: 08/06/2020 ರಿಂದ ಬಾರ್ ಮತ್ತು ರೆಸ್ಟೋರೆಂಟ್ ಅನ್ನು ಪ್ರಾರಂಭಿಸುವ ಸಾಧ್ಯತೆಯಿದ್ದು, ಈ ಬಗ್ಗೆ ಪ್ರತ್ಯೇಕ ಮಾರ್ಗಸೂಚಿಯನ್ನು ಹೊರಡಿಸಲಾಗುವುದು.

ಮೇಲಿನ ಷರತ್ತುಗಳನ್ನು ಪೂರೈಸಿರುವ ಮತ್ತು ವಿಧಿಸಿರುವ ಎಲ್ಲಾ ಷರತ್ತುಗಳನ್ನು ಪೂರೈಸಿರುವ ಸಿಎಲ್-4, ಸಿಎಲ್-6ಎ, ಸಿಎಲ್-7, ಸಿಎಲ್-7ಎ, ಸಿಎಲ್-7ಬಿ, ಸಿಎಲ್-9, ಸಿಎಲ್-16, ಸಿಎಲ್-17, ಸಿಎಲ್-18 ಮತ್ತು ವೈನ್ ಟಾವರಿನ್ ಸನ್ನದುಗಳ ಎಲ್ಲಾ ವಿವರಗಳನ್ನೊಳಗೊಂಡ ವಿಶೇಷ ವರದಿಯನ್ನು ಅಬಕಾರಿ ಉಪ ಆಯುಕ್ತರು ಸಲ್ಲಿಸುವುದು.

ಅಬಕಾರಿ ಆಯುಕ್ತರು

**ಪ್ರತಿಯನ್ನು:-**

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ.

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ಬೆಂಗಳೂರು.
2. ಡೈರೆಕ್ಟರ್ ಜನರಲ್ & ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್, ಕರ್ನಾಟಕ ರಾಜ್ಯ, ಬೆಂಗಳೂರು.
3. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
4. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾ ಜಂಟಿ ಆಯುಕ್ತರುಗಳಿಗೆ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ.
5. ರಾಜ್ಯದ ಎಲ್ಲಾ ವಿಭಾಗದ ಅಬಕಾರಿ ಜಂಟಿ ಆಯುಕ್ತರುಗಳಿಗೆ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ.
6. ರಾಜ್ಯದ ಎಲ್ಲಾ ಜಿಲ್ಲೆಗಳ ಅಬಕಾರಿ ಉಪ ಆಯುಕ್ತರುಗಳಿಗೆ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ.
7. ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಬಿ.ಸಿ.ಎಲ್, ಬೆಂಗಳೂರು ಇವರಿಗೆ ಮಾಹಿತಿಗಾಗಿ.
8. ಕಛೇರಿ ಪ್ರತಿ/ಹೆಚ್ಚಿನ ಪ್ರತಿ.

Scanned with CamScanner

**ಅಬಕಾರಿ ಆಯುಕ್ತರು, ಕರ್ನಾಟಕ ರಾಜ್ಯ, ಬೆಂಗಳೂರು ಇವರ ನಡವಳಿಗಳು**

ವಿಷಯ: ಕೋವಿಡ್-19 ಜಾರಿಯಲ್ಲಿರುವುದರಿಂದ, ಲಾಕ್‌ಡೌನ್ ಹಿನ್ನಲೆಯಲ್ಲಿ ಸಿಎಲ್-8, ಸಿಎಲ್-8ಎ ಮತ್ತು ಸಿಎಲ್-8ಬಿ ಸನ್ನದಿನಲ್ಲಿ ಮಾರಾಟವಾಗದೇ ಉಳಿದಿರುವ ಮದ್ಯ/ಬಿಯರ್ ಮತ್ತು ವೈನ್ ಅನ್ನು ಮಾರಾಟ ಮಾಡುವ ಕುರಿತು.

ಉಲ್ಲೇಖ:
1. Order and New Guidelines issued by the Ministry of Home Affairs, Government of India vide Order No. 40-3/2020-DM-I(A) dated: 30-05-2020.
2. ಈ ಕಛೇರಿಯ ಆದೇಶ ಸಂಖ್ಯೆ: ಇಸಿಇ/04/ಜಿಇಎನ್-ಐಎಂಎಲ್/2019-20, ದಿನಾಂಕ: 18-05-2020.

******

**ಪ್ರಸ್ತಾವನೆ:-**

ಉಲ್ಲೇಖ-01 ರಲ್ಲಿ ಕೇಂದ್ರ ಸರ್ಕಾರವು ನೀಡಿದ ಮಾರ್ಗಸೂಚಿಯಲ್ಲಿ ಕಂಟೈನ್‌ಮೆಂಟ್ ಜೋನ್‌ಗಳಲ್ಲಿ ಲಾಕ್‌ಡೌನ್ ಅವಧಿಯನ್ನು ದಿನಾಂಕ:30-06-2020 ರವರೆಗೆ ವಿಸ್ತರಿಸಲಾಗಿರುತ್ತದೆ. ಉಲ್ಲೇಖ-02 ರ ಆದೇಶದಲ್ಲಿ, ಕೋವಿಡ್-19 ಸಾಂಕ್ರಾಮಿಕ ರೋಗವನ್ನು ತಡೆಗಟ್ಟುವ ಕಾರಣದಿಂದ ಲಾಕ್‌ಡೌನ್ ಹಿನ್ನೆಲೆಯಲ್ಲಿ ತೆರೆಯದ ಸಿಎಲ್-8, ಸಿಎಲ್-8ಎ ಮತ್ತು ಸಿಎಲ್-8ಬಿ ಸನ್ನದುಗಳನ್ನು ದಿನಾಂಕ: 18.05.2020 ರಿಂದ ತೆರೆದು ಮದ್ಯ ಮಾರಾಟ ಮಾಡಲು ಅನುಮತಿ ನೀಡಲಾಗಿರುತ್ತದೆ.

ಸದರಿ ಅನುಮತಿಯಲ್ಲಿ "ಹಾಲಿ ಇರುವ ದಾಸ್ತಾನಿಗೆ ಮಾತ್ರ ಅನ್ವಯವಾಗುವುದು" ಎಂಬ ಷರತ್ತು ವಿಧಿಸಿದ್ದು, ಸದರಿ ಷರತ್ತನ್ನು ಕೈಬಿಡುವ ಸಂಬಂಧ ಈ ಕೆಳಕಂಡ ಆದೇಶ.

**ಈ ಕಛೇರಿಯ ಆದೇಶ ಸಂಖ್ಯೆ: ಇಸಿಐ/04/ಜಿಇಎನ್-ಐಎಂಎಲ್/2019-20, ದಿ:01-06-2020**

ಪ್ರಸ್ತಾವನೆಗಳಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ರಾಜ್ಯದಲ್ಲಿರುವ ಸಿಎಲ್-8, ಸಿಎಲ್-8ಎ ಹಾಗೂ ಬಿ.ಎಸ್.ಎಫ್. ಮತ್ತು ಪ್ಯಾರಾ ಮಿಲಿಟರಿ ಫೋರ್ಸ್ ರವರಿಗೆ ಸಿಎಲ್-8ಬಿ ಸನ್ನದುಗಳನ್ನು ಸಿಎಲ್-2 ಸನ್ನದುಗಳ ರೀತಿಯಲ್ಲಿ **ದಿನಾಂಕ: 18.05.2020 ರಿಂದ** ಮುಂದಿನ ಆದೇಶದವರೆಗೆ ತೆರೆದು ಮದ್ಯ ಮಾರಾಟ ಮಾಡಲು ಹೊರಡಿಸಲಾಗಿರುವ ಉಲ್ಲೇಖ-02 ರ ಆದೇಶದಲ್ಲಿ ಕ್ರ.ಸಂ.03 ರಲ್ಲಿ ವಿಧಿಸಲಾಗಿರುವ "ಹಾಲಿ ಇರುವ ದಾಸ್ತಾನಿಗೆ ಮಾತ್ರ ಅನ್ವಯವಾಗುವುದು" ಎಂಬ ಷರತ್ತನ್ನು ಕೈಬಿಟ್ಟು, "ಹೊಸ ದಾಸ್ತಾನನ್ನು ಪಡೆದು ಶೇಖರಣೆ ಮಾಡಿ ವಿತರಿಸಲು" ಅನುಮತಿ ನೀಡಲಾಗಿದೆ. ಉಳಿದಂತೆ ವಿಧಿಸಲಾಗಿರುವ ಬೇರೆ ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಅಬಕಾರಿ ಆಯುಕ್ತರು

**ಪ್ರತಿಯನ್ನು:-**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
2. ಡೈರೆಕ್ಟರ್ ಜನರಲ್ & ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಕರ್ನಾಟಕ ರಾಜ್ಯ, ಬೆಂಗಳೂರು.
3. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
4. ರಾಜ್ಯದ ಎಲ್ಲಾ ವಿಭಾಗದ ಅಬಕಾರಿ ಜಂಟಿ ಆಯುಕ್ತರುಗಳಿಗೆ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ.
5. ರಾಜ್ಯದ ಎಲ್ಲಾ ಜಿಲ್ಲೆಗಳ ಅಬಕಾರಿ ಉಪ ಆಯುಕ್ತರುಗಳಿಗೆ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ.
6. ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಬಿ.ಸಿ.ಎಲ್, ಬೆಂಗಳೂರು ಇವರಿಗೆ ಮಾಹಿತಿಗಾಗಿ.
7. ಕಛೇರಿ ಪ್ರತಿ/ಹೆಚ್ಚಿನ ಪ್ರತಿ.

Scanned with CamScanner